

ಫೋನು ಮಾಡಿ ಪೇಟೆಯಿಂದ ಕರೆಸುವ ಅಬ್ಬಾಸ್ ಸಾಬರ 'ಬಾಡಿಗೆ ಆಟೋ' ಬಿಟ್ಟರೆ ಅವಳಿಗೆ ಇನ್ಯಾವ ಬಾಡಿಗೆ ವಸ್ತುಗಳೂ ಗೊತ್ತಿರಲಿಲ್ಲ. ಹಿರಿಯರೇ ಕೈಯಾರೆ ಕಟ್ಟಿದ ಮಣ್ಣಿನ ಗೋಡೆಯ ಮನೆಯಲ್ಲಿ, ತಾವೇ ಬೆಳೆಯುವ ತರಕಾರಿಗಳ ಆಹಾರ ಸೇವಿಸುತ್ತಾ ಬದುಕು ಕಂಡಿದ್ದ ಅಜ್ಜಿಗೆ ಇಡೀ ಜೀವನವೇ ತೀರಾ ಸ್ವಂತದ್ದಾಗಿದ್ದರಿಂದ ಅವಳು ಹಾಗೆ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಬಾಡಿಗೆ ಮನೆಗಳು ಜಾಸ್ತಿಯಾದ ಮೇಲೆ ಅಲ್ಲೂ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿಕೊಂಡಿತೋ ಅಥವಾ ಬಂಡವಾಳಶಾಹಿಗಳೂ ಬಾಡಿಗೆ ಮನೆಗಳು ಜಾಸ್ತಿಯಾಗುವುದಕ್ಕೆ ಒಂದು ಕಾರಣವೋ ಗೊತ್ತಿಲ್ಲ. ಒಟ್ಟಿನಲ್ಲಿ ಮನೆ ಕಟ್ಟಿಸಿ, ಬಾಡಿಗೆಗೆ ಕೊಟ್ಟು ದುಡ್ಡು ಮಾಡುವುದು ಇಂದಿನ ಕಾಲದ ಒಂದು ದೊಡ್ಡ ವ್ಯವಹಾರ ಮಾದರಿ. ಮನೆ ಅಂತ ಒಂದು ಸಿಕ್ಕಿದರೆ ಸಾಕು, ಅಂಗಳ–ಹಿತ್ತಲು ಏನೂ ಬೇಡ ಎನ್ನುವ ಅಲ್ಪತೃಪ್ತ ಆಧುನಿಕ ಮಾನವರಿಗಾಗಿಯೇ ಹದಿನೈದಿಪ್ಪತ್ತು ಮಹಡಿಗಳ ಅಪಾರ್ಟುಮೆಂಟುಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟು ಕೋಟಿ ಕೋಟಿ ದುಡ್ಡು ಮಾಡುವ ಶ್ರೀಮಂತರು 'ಬಾಳು ಬೆಳಗಿದ ಬಾಡಿಗೆ ಮನೆ' ಎಂದು ಆತ್ಮಕಥೆ ಬರೆದಾದರೂ ಬಾಡಿಗೆ ಮನೆಗಳ ಋಣ ತೀರಿಸಬೇಕು ಎನ್ನುವುದು ನನ್ನ ಅನಿಸಿಕೆ. ಬಾಡಿಗೆ ಮನೆಗಳು ಹೆಚ್ಚಿನದಾಗಿ ಕುಟುಂಬಸ್ಥರಿಗಾದರೆ, ಈ 'ಪೇಯಿಂಗ್ ಗೆಸ್ಟ್' ಎಂಬ ವ್ಯವಸ್ಥೆ ಮದುವೆಯಾಗದ ಏಕಾಂಗಿ ಹುಡುಗ ಹುಡುಗಿಯರಿಗೆ ಸೂಕ್ತವಾಗಿರುವುದು. ಒಂದು ಬಗೆಯಲ್ಲಿ ಬಾಡಿಗೆ ಮನೆಗಳ ಮುಂದುವರಿದ ಭಾಗವೇ ಈ ಪಿ.ಜಿ.ಗಳು. ಈಗಂತೂ ಬೆಂಗಳೂರಿನ ಯಾವ ಮೂಲೆಗೆ ಹೋದರೂ ಮುಗಿಲೆತ್ತರದ ಅಪಾರ್ಟುಮೆಂಟುಗಳು, ಆಂಧ್ರ ರೆಡ್ಡಿ ಪಿ.ಜಿ.ಗಳು ಕಾಣಸಿಗುತ್ತವೆ. ಬಹುತೇಕ ಎಲ್ಲ ನಗರಗಳ ಪರಿಸ್ಥಿತಿಯೂ ಇದೇ ಆಗಿದೆ. ಎಲ್ಲ ಕಡೆಯೂ ಹೆಚ್ಚು ಬಾಡಿಗೆ, ಮಾಲೀಕರ ಕಿರಿಕಿರಿ, ಮನೆ ಬಿಡುವಾಗ ಅಡ್ವಾನ್ಸ್ ಹಣ ಕೊಡದೇ ಹಿಂಸೆ ಇತ್ಯಾದಿ ಸಮಸ್ಯೆಗಳು ಇದ್ದೇ ಇರುತ್ತವೆ. ಇವೆಲ್ಲಾ ಈಗ ಬಾಡಿಗೆದಾರರ ಸಾರ್ವಕಾಲಿಕ ಸ್ವಂತ ಸಮಸ್ಯೆಗಳಾಗಿಹೋಗಿವೆ. ಬಾಡಿಗೆ ಮನೆ ಸಂಸ್ಕೃತಿಯು ನಮ್ಮನ್ನು ಸ್ವತಂತ್ರರಾಗಿ ಮಾಡುತ್ತಿದೆಯೋ ಅತಂತ್ರರಾಗಿ ಮಾಡುತ್ತಿದೆಯೋ ಎಂಬುದು ಯೋಚಿಸಬೇಕಾದ ವಿಷಯವೇ. ಈ ಗಂಭೀರತೆಯನ್ನು ಬದಿಗಿಟ್ಟು ನೋಡಿದರೆ ಬಾಡಿಗೆ ಮನೆಗಳಲ್ಲಿಯೂ ವಿಶೇಷವಾದ ಜೀವಂತಿಕೆಯ ಕುರುಹುಗಳು ಕಾಣಸಿಗುತ್ತವೆ.

ಇತ್ತೀಚೆಗೆ ಗೆಳೆಯನೊಬ್ಬ ಅವರ ಚಿಕ್ಕಪ್ಪ ಸ್ವಂತ ಮನೆ ಕಟ್ಟಲು ಹೊರಟು ಹಣದ ಸಮಸ್ಯೆಯಿಂದ ಒದ್ದಾಡುತ್ತಿರುವುದರ ಬಗ್ಗೆ ಹೇಳಿದಾಗ ಮತ್ತೊಬ್ಬ ಗೆಳೆಯ 'ಲೇ ಇವ್ರಿಗೆಲ್ಲಾ ಬದುಕೋ ದಾರಿ ಗೊತ್ತಿಲ್ಲ. ಆ ಕೋಗಿಲೆಗಳನ್ನು ನೋಡಿ ಕಲೀರಿ, ಕಾಗೆಯ ಗೂಡಿನಲ್ಲಿ ಮರಿ ಬೆಳೆಸಿ ಸ್ವಂತ ಗೂಡಿನ ಬಗ್ಗೆ ತಲೆಯೇ ಕೆಡಿಸಿಕೊಳ್ಳದೇ ಹೇಗೆ ಆರಾಮಾಗಿರ್ತವೆ ಅಂತ. ಬಾಡಿಗೆ ಕೂಡ ಕಟ್ಟಲ್ಲ ಅವು. ಬದುಕೋದಕ್ಕೆ ಸ್ವಂತ ಮನೆ ಬೇಕು ಅಂತ ಯಾರು ಹೇಳಿದ್ದು? ಆರಾಮಾಗಿ ಬಾಡಿಗೆ ಕಟ್ಕೋ ಕೋಗಿಲೆಗಳಾಗೋಣ' ಎಂದಿದ್ದ. 'ನಿಮ್ಮ ಓನರ್ ನಂಗೆ ಪರಿಚಯ, ಅವ್ರಿಗೆ ಇಂಡೈರೆಕ್ಟ್ ಆಗಿ ಕಾಗೆ ಅಂತ ಹೇಳ್ತಿದೀಯಾ, ಮಾಡ್ತೀನಿ ತಡಿ' ಎಂದು ಯಾರೋ ಬೆದರಿಸಿ ಬಾಯಿ ಮುಚ್ಚಿಸಿದ್ದರು.

ಒಂದು ದೃಷ್ಟಿಯಲ್ಲಿ ನೋಡಿದರೆ ಬಾಡಿಗೆ ಮನೆಯೆನ್ನುವುದು ನಮಗೇ ಗೊತ್ತಿಲ್ಲದಂತೆ ನಮ್ಮ ಅನೇಕ ಆಸೆಗಳನ್ನು ಪೂರೈಸಬಲ್ಲುದು. ಉದಾಹರಣೆಗೆ, ನನಗೆ ಐದಾರು ವರ್ಷವಾಗಿದ್ದಾಗ ಮೊದಲ ಬಾರಿ ನಾವು ಬಾಡಿಗೆ ಮನೆ ಬದಲಾಯಿಸಬೇಕಾದ ಪರಿಸ್ಥಿತಿ ಬಂತು. ಅಲ್ಲಿಯವರೆಗೂ ಆ ಮನೆಯನ್ನು ನಮ್ಮ ಸ್ವಂತ ಮನೆಯೆಂದೇ ಅಂದುಕೊಂಡಿದ್ದ ನನಗೆ ಆಘಾತವಾಯ್ತು. ಮೂರ್ನಾಲ್ಕು ತಿಂಗಳಿಗೊಮ್ಮೆ ಬಂದು ಮಾತಾಡಿಸಿ ಹೋಗುತ್ತಿದ್ದ 'ಓನರ್ ಅಂಕಲ್' ಬರುತ್ತಾರೆ ಎಂಬ ಕಾರಣಕ್ಕೆ ಈ ಬಾರಿ ಮನೆಯನ್ನೇ ಯಾಕೆ ಖಾಲಿ ಮಾಡುತ್ತಿದ್ದೇವೆ ಎಂದು ಅರ್ಥವಾಗಲಿಲ್ಲ. ನನ್ನ ಬದುಕಿನ ಯಾವುದೋ ಭಾಗವನ್ನು ಬಲವಂತವಾಗಿ ನನ್ನಿಂದ ಕಿತ್ತುಕೊಂಡಂತಹ ಅನುಭವವಾಗಿ ಸಿಕ್ಕಾಪಟ್ಟೆ ಬೇಜಾರಾಗಿತ್ತು. ಆ ಬೇಸರ ಹೊಸ ಮನೆ ನೋಡಿದ ಮೇಲೆ ಛಕ್ಕಂತ ಮಾಯವಾಯ್ತು. ಹಳೇ ಮನೆಯಂತೆ ಕಿಷ್ಕಿಂಧೆ ಪಟ್ಟಣವಾಗಿರದೆ ಎದುರು ಆಟವಾಡಲು ಸಾಕಷ್ಟು ಜಾಗ ಹೊಂದಿ ವಿಶಾಲವಾಗಿದ್ದ ಆ ಮನೆ ಒಂದೇ ಸೆಕೆಂಡಿಗೆ ಹಳೇ ಮನೆಯ ನೆನಪುಗಳನ್ನೆಲ್ಲಾ ಸರಕ್ಕಂತ ಅಳಿಸಿಹಾಕಿಬಿಟ್ಟಿತು. ಹೊಸ ಮನೆಯಲ್ಲಿ